ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಸಿ4(6)ರಜೆ.01/2013-14 ದಿನಾಂಕ:07.10.2016

## ಜ್ಞಾಪನ

ವಿಷಯ: 2016-17ನೇ ಸಾಲಿನಲ್ಲಿ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ನಿಗಧಿಪಡಿಸಿದ ಶಾಲಾ ದಿನಗಳ ಬೋಧನಾ ಅವಧಿ ಸರಿದೂಗಿಸುವ ಬಗ್ಗೆ.

ಉಲ್ಲೇಖ:1.ಈ ಕಛೇರಿಯ ಜ್ಞಾಪನಾಸಂಖ್ಯೆ:ಸಿ4(6)ರಜೆ.01/13-14:ದಿ: 15.02.2016

2.ಈ ಕಛೇರಿಯ ಜ್ಞಾಪನಾಸಂಖ್ಯೆ:ಸಿ4(6)ರಜೆ.01/13-14:ದಿ: 21.09.2016

3.ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳ ಟಿಪ್ಪಣಿ ದಿನಾಂಕ:21/09/2016

4.ವಿರೋಧ ಪಕ್ಷದ ಮುಖ್ಯ ಸಚೇತಕರು, ಕರ್ನಾಟಕ ವಿಧಾನ ಪರಿಷತ್ ಮತ್ತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಘಗಳು ಹಾಗೂ ಉಪನಿರ್ದೇಶಕರುಗಳು ಸಲ್ಲಿಸಿರುವ ರಜಾ ಮಾಹಿತಿಗಳು

&&&&

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2016-17ನೇ ಸಾಲಿನಲ್ಲಿ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಉಲ್ಲೇಖ-1 ರ ಈ ಕಛೇರಿ ಜ್ಞಾಪನಾ ಪತ್ರದಲ್ಲಿ ನಿಗಧಿಪಡಿಸಿದ ಮಧ್ಯಂತರ ರಜಾ ಅವಧಿಯನ್ನು ಉಲ್ಲೇಖಿತ-2 ರ ಈ ಕಛೇರಿ ಜ್ಞಾಪನ ಪತ್ರದಲ್ಲಿ ಶಾಲಾ ದಿನಗಳ ಬೋಧನಾ ಅವಧಿ ಕಡಿಮೆಯಾಗುವ ಹಿನ್ನೆಲೆಯಲ್ಲಿ ಒಟ್ಟು 6 ದಿನಗಳ ರಜೆಗಳನ್ನು ಸರಿದೂಗಿಸಲು ಆದೇಶ ನೀಡಲಾಗಿತ್ತು. ಆದರೆ ಉಲ್ಲೇಖ-3 ಮತ್ತು 4 ರಲ್ಲಿನ ಮನವಿಗಳನುಸಾರ ಆಯಾ ಜಿಲ್ಲೆಗಳ ಸ್ಥಳೀಯ ಪರಿಸ್ಥಿತಿಗನುಗುಣವಾಗಿ 1 ರಿಂದ 10 ದಿನಗಳ ವರೆಗೆ ರಜೆಗಳನ್ನು ನೀಡಲಾಗಿದ್ದು. ಅದರಂತೆ ಮರು ಹೊಂದಾಣಿಕೆಗೆ ಅವಕಾಶ ನೀಡಬೇಕಾಗಿ ಕೋರಿಕೆ ಸಲ್ಲಿಸಿರುತ್ತಾರೆ ಆದ್ದರಿಂದ ಈ ಕೆಳಕಂಡ ಷರತ್ತಿಗೊಳಪಟ್ಟು ಉಪನಿರ್ದೇಶಕರುಗಳು ತಮ್ಮ ಜಿಲ್ಲೆಗಳಲ್ಲಿ ನೀಡಿದ ರಜೆಗಳಿಗೆ ಅನುಗುಣವಾಗಿ ಶಾಲಾ ದಿನಗಳನ್ನು ಸರಿದೂಗಿಸುವ ಬಗ್ಗೆ ಕ್ರಮವಹಿಸಲು ತಿಳಿಸಿದೆ.

- ಒಂದು ಮತ್ತು ಎರಡು ದಿನಗಳು ರಜೆ ನೀಡಿರುವ ತುಮಕೂರು, ಶಿವಮೊಗ್ಗ, ಮಧುಗಿರಿ, ಚಾಮರಾಜನಗರ, ದಕ್ಷಿಣಕನ್ನಡ, ಉಡುಪಿ, ಚಿಕ್ಕೋಡಿ, ಬಿಜಾಪುರ,ಹಾವೇರಿ, ಕೊಪ್ಪಳ, ಬೀದರ್ ಈ 11 ಜಿಲ್ಲೆಗಳಲ್ಲಿ ದಿನಾಂಕ:28/10/2016 ರಿಂದು ಶಾಲೆ ಪ್ರಾರಂಭಿಸುವುದು.

  ಒಂದು ದಿನ ಶಾಲೆ ಮುಚ್ಚಿದ್ದಲ್ಲಿ ನವೆಂಬರ್ 2016ರ ಮಾಹೆಯಲ್ಲಿ ಬರುವ ಎರಡು ಶನಿವಾರಗಳು ಒಳಗೊಂಡಂತೆ [ಸಾಮಾನ್ಯ ದಿನದಂತೆ ಅಂದರೆ ಬೆಳಿಗ್ಗೆಯಿಂದ ಸಂಜೆಯವರೆಗೆ] ಶಾಲೆ ನಡೆಸತಕ್ಕದ್ದು.

  ಎರಡು ದಿನ ಶಾಲೆ ಮುಚ್ಚಿದ್ದಲ್ಲಿ ನವೆಂಬರ್ 2016ರ ಮಾಹೆಯಲ್ಲಿ ಬರುವ ನಾಲ್ಕು ಶನಿವಾರಗಳು ಒಳಗೊಂಡಂತೆ [ಸಾಮಾನ್ಯ ದಿನದಂತೆ ಅಂದರೆ ಬೆಳಿಗ್ಗೆಯಿಂದ ಸಂಜೆಯವರೆಗೆ] ಶಾಲೆ ನಡೆಸತಕ್ಕದ್ದು.

- ಮೂರು ಮತ್ತು ಅದಕ್ಕಿಂತ ಹೆಚ್ಚು ದಿನಗಳು ರಜೆ ನೀಡಿರುವ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ, ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಮೈಸೂರು,

ಮಂಡ್ಯ, ಹಾಸನ, ಚಿಕ್ಕಮಗಳೂರು, ಕೊಡಗು, ಬಾಗಲಕೋಟೆ, ಧಾರವಾಡ, ಉತ್ತರಕನ್ನಡ, ಶಿರಸಿ, ಗುಲ್ಬರ್ಗಾ,ಯಾದಗಿರಿ, ಬಳ್ಳಾರಿ, ಗದಗ್, ರಾಯಚೂರು, ದಾವಣಗೆರೆ, ಬೆಳಗಾಂ ಒಟ್ಟು 23 ಜಿಲ್ಲೆಗಳು ದಿನಾಂಕ:24/10/2016 ರಂದು ಶಾಲೆ ಪ್ರಾರಂಭಿಸಿ ನವೆಂಬರ್ 2016ರ ಮಾಹೆಯಲ್ಲಿ ಬರುವ ನಾಲ್ಕು ಶನಿವಾರಗಳು ಒಳಗೊಂಡಂತೆ [ಸಾಮಾನ್ಯ ದಿನದಂತೆ ಅಂದರೆ ಬೆಳಿಗ್ಗೆಯಿಂದ ಸಂಜೆಯವರೆಗೆ] ಶಾಲೆ ನಡೆಸತಕ್ಕದ್ದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

1.ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ / ಧಾರವಾಡ ಆಯುಕ್ತಾಲಯ ಇವರ ಮುಂದಿನ ಕ್ರಮಕ್ಕಾಗಿ.
2.ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಮುಂದಿನ ಕ್ರಮಕ್ಕಾಗಿ.
3.ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ನಿಮ್ಮ ಅಧೀನದಲ್ಲಿ ಬರುವ ಶಾಲಾ ಮುಖ್ಯಸ್ಥರುಗಳಿಗೆ ತಿಳಿಸಲು ಸೂಚಿಸಿದೆ.
4.ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ನಿಮ್ಮ ಅಧೀನದಲ್ಲಿ ಬರುವ ಶಾಲಾ ಮುಖ್ಯಸ್ಥರುಗಳಿಗೆ ತಿಳಿಸಲು ಸೂಚಿಸಿದೆ.
5.ಅಧ್ಯಕ್ಷರು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮತ್ತು ಪ್ರೌಢಶಾಲಾ ಸಹ ಶಿಕ್ಷಕರ ಸಂಘ ಇವರ ಮಾಹಿತಿಗಾಗಿ.6. ಕಛೇರಿ ಪ್ರತಿ.